ಈ ದಿನ ದಿನಾಂಕಃ 28-11-2023 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಬಿ ಆರ್ ಎಂ ವಕೀಲರಿಂದಃ</u>

6. ನನ್ನ ತಂದೆ ದಾವಾ ಸ್ವತ್ತನ್ನು ಶಿವಲಿಂಗಪ್ಪನವರ ಕಡೆಯಿಂದ ಖರೀದಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. 1987 ರಲ್ಲಿ ನಮ್ಮ ವಿಕ್ರಿ ದಾರರ ಹೆಸರಿನಲ್ಲಿ ದಾಖಲೆಗಳಿದ್ದ ಬಗ್ಗೆ ನಾನು ಆ ಕಾಲಕ್ಕೆ ಬಾಲಕನಾಗಿದ್ದರಿಂದ ನನಗೆ ಗೊತ್ತಿಲ್ಲ. ಆಗ ನನಗೆ 15 ವರ್ಷಗಳಾಗಿದ್ದವು. 15 ವರ್ಷಕ್ಕೆ ಸಾಮಾನ್ಯ ಜ್ಞಾನ ಮತ್ತು ತಿಳುವಳಿಕೆ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ದೋಣಿ ಹಳ್ಳಿ ಗ್ರಾಮ ಮುದಿಗೆರೆ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿತ್ತು. ಆ ಕಾಲಕ್ಕೆ ದೋಣಿ ಹಳ್ಳಿ ಗ್ರಾಮ ಬಿಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿತ್ತು ಮತ್ತು ಮುದಿಗೆರೆ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಇರಲಿಲ್ಲ ಎಂದರೆ ಸರಿಯಲ್ಲ.

7. ದಾವಾ ಸ್ವತ್ತಿನ ಅಳತೆಯ ಕುರಿತು ಕ್ರಯಪತ್ರ ನೊಂದಣಿ ಕಾಲಕ್ಕೆ ದಾಖಲೆಗಳನ್ನು ಹಾಜರುಪಡಿಸಲಾಗಿತ್ತು. ಕ್ರಯಪತ್ರವನ್ನು ಓಬಳಪ್ಪನವರು ಬರೆದಿರುತ್ತಾರೆ. ಆ ದಾಖಲೆಯಲ್ಲಿ ಸಹಿ ಮಾಡಿದ ಸಾಕ್ಷಿದಾರರ ಹೆಸರು ನನಗೆ ಗೊತ್ತಿಲ್ಲ. ಚನ್ನಬಸಪ್ಪ ಬಿನ್ ಶಿವಲಿಂಗಪ್ಪ ನಮ್ಮೂರಿನವರು ಅವರನ್ನು ಸಾಕ್ಷಿ ಮಾಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಅವರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮೂಲತಃ ಪ್ರತಿವಾದಿಗೆ ಸೇರಿತ್ತು ಅದನ್ನು ನಿಪಿ 1 ರಲ್ಲಿ ಸೇರಿಸಿಕೊಂಡು ಕ್ರಯ ಪತ್ರ ನೊಂದಾಯಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಪರಿಶಿಷ್ಟದಲ್ಲಿ ಕಾಣಿಸಿರುವ ದಕ್ಷಿಣದ ಚೆಕ್ಕುಬಂದಿಯ ಮಾಲೀಕರಿಗೆ ಅಲ್ಲಿ ಹಿತ್ತಲು ಇರುತ್ತದೆ ಎಂದರೆ ಸರಿಯಲ್ಲ.

8. ದಾವಾ ಸ್ವತ್ತಿನ ಖಾತೆ ಬದಲಾಯಿಸಿಕೊಳ್ಳಲು ನನ್ನ ತಂದೆ ಅರ್ಜಿಯನ್ನು ಸಲ್ಲಿಸಿದ್ದರು. ನನ್ನ ತಂದೆ ಅರ್ಜಿ ಕೊಡದ ಹಿನ್ನೆಲೆಯಲ್ಲಿ ಖಾತೆ ಅವರ ಹೆಸರಿನಲ್ಲಿ ಬದಲಾಗಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಮರಣದ ಕಾಲಕ್ಕೆ ದಾವಾ ಸ್ವತ್ತಿನ ಖಾತೆ ಅವರ ಹೆಸರಿನಲ್ಲಿತ್ತು.

ನನ್ನ ತಂದೆಯ ಹೆಸರಿನಲ್ಲಿದ್ದ ಖಾತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಖಾತೆ ಬದಲಾದ ದಿನಾಂಕ ನನಗೆ ಗೊತ್ತಿಲ್ಲ.

9. ನಿಪಿ 3 ರಲ್ಲಿ 58x58 ಅಳತೆ ಕಾಣಿಸಲಾಗಿದೆ ಎಂದರೆ ಸಾಕ್ಷಿ ಅದು ತಪ್ಪಾಗಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನಮ್ಮ ಆಸ್ತಿಯಲ್ಲ ಎಂದರೆ ಸರಿಯಲ್ಲ. ಇ-ಸ್ವತ್ತನ್ನು ಮಾಡಿಸಿಕೊಳ್ಳಲು ದಾವೆ ಸಲ್ಲಿಸಿದ ನಂತರ 2019 ರಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಇ-ಸ್ವತ್ತಿನಲ್ಲಿರುವ ಅಳತೆಯನ್ನು ನನಗೆ ಹೇಳಲಾಗುವುದಿಲ್ಲ. ಇ-ಸ್ವತ್ತು ದಾಖಲೆಯಲ್ಲಿ ನಮ್ಮ ಆಸ್ತಿ ಅಳತೆ 48x52 ಇದೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ಇ-ಸ್ವತ್ತು ನಮ್ಮ ಆಸ್ತಿಗೆ ಸೇರಿದ್ದು ಅದನ್ನು ಪಿಡಿಓರವರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ್ದರಿಂದ ನಿಡಿ 2 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿನ ಮೀಟರ್ ಲೆಕ್ಕಲ್ಲಿರುವ ಅಳತೆಯನ್ನು ಅಡಿಗಳಲ್ಲಿ ಪರಿಗಣಿಸಿದರೆ 42x58 ಅಡಿಗಳಾಗುತ್ತವೆ ಎಂದರೆ ಸರಿಯಲ್ಲ. ನಿಡಿ 2 ರಲ್ಲಿರುವ ಆಸ್ತಿ ನಮ್ಮದ್ದಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಮತ್ತು ಅದನ್ನು ನಾವು ಅದರ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

10. ದಾವಾ ಸ್ವತ್ತನ್ನು ರಂಗಪ್ಪನವರ ಖಣ ಎಂದು ಕರೆಯುತ್ತಾರೆ ಮತ್ತು ಅದು ಖಾತಾ ಸಂ. 58 ರಲ್ಲಿದೆ ಎಂದರೆ ಸರಿಯಲ್ಲ. ಖಾತೆ ಸಂ.58 ರಲ್ಲಿರುವ ದಾವಾ ಚೆಕ್ಕುಬಂದಿ ಆಸ್ತಿಯನ್ನು ನಾವು ಪೋಲಿಸರ ಸಹಯೋಗದೊಂದಿಗೆ ಒತ್ತಾಯ ಪೂರ್ವಕವಾಗಿ ಅಳತೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಇಸ್ವತ್ತಿನ ಕಾಲಕ್ಕೆ ಜಿಪಿಎಸ್ ಅಳತೆ ಮಾಡಿದ್ದು ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ದಾವಾ ಸ್ವತ್ತು ನಮಗೆ ಸೇರಿದ ಆಸ್ತಿಯಲ್ಲದ ಕಾರಣಕ್ಕಾಗಿ ಜಿ ಪಿ ಎಸ್ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಮ್ಮೂರಿನಲ್ಲ್ ದ್ಯಾಮಪ್ಪ ಎಂ ಬಇಬ್ಬರು ವ್ಯಕ್ತಿಗಳಿದ್ದು ಬೇರೊಬ್ಬ ದ್ಯಾಮಪ್ಪನವರನ್ನು ದ್ಯಾಮಪ್ಪ ಬಿನ್ ಶಿವಲಿಂಗಪ್ಪ ಎಂದು ಕರೆತಂದು ಮಧ್ಯಪಾನ ಮಾಡಿಸಿ ಆ ಅಮಲಿನಲ್ಲಿ ನಿಪಿ 1 ಕ್ಕೆ ಸಹಿಯನ್ನು ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ 1 ರ ವಿಕ್ರಿದಾರರ ಸೇರಿದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ.

11. ಪ್ರತಿವಾದಿಯನ್ನು ಬಲವಂತವಾಗಿ ದಾವಾ ಆಸ್ತಿಯಿಂದ ಹೊರಹಾಕಲು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನಮಗೂ ಯಾವುದೆ ರೀತಿ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಇಂದಿಗೂ ಸಹ ಪ್ರತಿವಾದಿ ಸ್ವಾದೀನಾನುಭವದಲ್ಲಿದದಾರೆ

ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಆಸ್ತಿಯಲ್ಲಿ ಅನುಬೋಗದಲ್ಲಿರುವುದರಿಂದ ಆತನನ್ನು ಒತ್ತಾಯಪೂರ್ವಕವಾಗಿ ಹೊರದಬ್ಬಲು ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 1961 ರಿಂದಲೂ ದಾವಾ ಸ್ವತ್ತು ರಂಗನ ತಮ್ಮ ದ್ಯಾಮಪ್ಪನವರ ಸೇರಿದ ಆಸ್ತಿ ಅವರಿಗೆ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಬಿಲ್ಲಹಳ್ಳಿ ಗ್ರಾಮ ಪಂಚಾಯಿತಿಯಿಂದ ಮುದಿಗೆರೆ ಗ್ರಾಮ ಪಂಚಾಯಿತಿಗೆ ಸೇರಿಸುವ ಕಾಲಕ್ಕೆ ಕಳೆದುಹೊದ ದಾಖಲೆಗಳ ಲಾಭ ಪಡೆದು ದಾವಾ ಆಸ್ತಿಯ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಆಯುಕ್ತರನ್ನು ನೇಮಿಸಿ ದಾವಾ ಆಸ್ತಿಯ ಅಳತೆ ಮಾಡಿಸಲು ನನಗೆ ತೊಂದರೆ ಇಲ್ಲ. ಪ್ರತಿವಾದಿಗೆ ದಾವಾ ಸ್ವತ್ತಿನ ದಾಖಲೆಗಳನ್ನು ಕೊಡದಂತೆ ನಾನು ಪಂಚಾಯಿತಿ ಅಧಿಕಾರಿಗಳಿಗೆ ಪ್ರಭಾವ ಬೀರಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.